ರಾಜ್ಯದ ಅರಣ್ಯ ಇಲಾಖಾ ವ್ಯಾಪ್ತಿಯ ಎಸ್ಟೇಟ್ ಮತ್ತು ರೆಸಾರ್ಟ್ಸ್

4327(5211) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಅರಣ್ಯ ಇಲಾಖಾ ವ್ಯಾಪ್ತಿಯಲ್ಲಿ ಎಷ್ಟು ಎಸ್ಟೇಟ್‌ಗಳು ಹಾಗೂ ರೆಸಾರ್ಟ್ಸ್‌ಗಳಿವೆ;

ಆ) ಇಲಾಖಾ ಸ್ವಾಮ್ಯಕ್ಕೆ ಒಳಪಡದ ಎಸ್ಟೇಟ್ ಹಾಗೂ ರೆಸಾರ್ಟ್ಸ್‌ಗಳು ಅರಣ್ಯ ವ್ಯಾಪ್ತಿಯಲ್ಲಿ ಇವೆಯೇ ; ಇದ್ದಲ್ಲಿ, ಅವುಗಳು ಯಾವುವು ; ಇವುಗಳು ಯಾರ ಸ್ವಾಮ್ಯಕ್ಕೆ ಒಳಪಟ್ಟಿವೆ ; ಹಾಗೂ ಯಾವ ಆಧಾರದ ಮೇಲೆ ಇವುಗಳಿಗೆ ಪರವಾನಗಿ ನೀಡಲಾಗಿದೆ ; ವಿವರ ನೀಡುವುದು ;

ಇ) ಅರಣ್ಯ ಇಲಾಖೆಗೆ ಸೇರಿದ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ಗಡಿ ಭಾಗಗಳಲ್ಲಿನ ಭೂ ಪ್ರದೇಶವು ಕೇರಳ ಹಾಗೂ ತಮಿಳುನಾಡು ರಾಜ್ಯಗಳಿಂದ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಭೂ ಪ್ರದೇಶ ಒತ್ತುವರಿಯಾಗಿರುತ್ತದೆ ; ವಿವರ ನೀಡುವುದು ;

ಈ) ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮ ಏನು ; ಗಡಿ ಭಾಗದ ಭೂ ಪ್ರದೇಶದ ರಕ್ಷಣೆಗಾಗಿ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ; ವಿವರ ನೀಡುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಎಸ್ಟೇಟುಗಳು – 1

ರೆಸಾರ್ಟ್ಸ್‌ಗಳು – 0

ಅ)	ಎಸ್ಟೇಟುಗಳು	ವಿಸ್ತೀರ್ಣ	ಒಡೆತನ	ಷರಾ
	ಬಿಳಿಗಿರಿರಂಗನ ಎಸ್ಟೇಟ್	30.5 ಎಕರೆ 450 ಯಾರ್ಡ್	ಸಿ.ಡಬ್ಲ್ಯೂ.ಜಿ. ಮೋರೀಸ್	ಗುತ್ತಿಗೆ ಆಧಾರದ ಮೇಲೆ
	ಎಮರಾಲ್ಡ್ ವ್ಯಾಲಿ ಎಸ್ಟೇಟ್	35.20 ಎಕರೆ	ಕೃಷ್ಣಅಯ್ಯರ್	ಗುತ್ತಿಗೆ ಆಧಾರದ ಮೇಲೆ
	ಹೊನ್ನಮೇಟಿ ಎಸ್ಟೇಟ್	184.00 ಎಕರೆ	ನೀಲಗಿರಿ ಪ್ಲಾಂಟೇಷನ್ ಲಿಮಿಟೆಡ್	ಗುತ್ತಿಗೆ ಆಧಾರದ ಮೇಲೆ
	ಅತ್ತಿಕಾನ್ ಎಸ್ಟೇಟ್			
	ಗೆರಟ್ಟಿ	8.20 ಎಕರೆ	ಫ್ರೆಂಲಿನ್ ಸ್ಮಿತ್	ಗುತ್ತಿಗೆ ಆಧಾರದ ಮೇಲೆ
	ಹೆಗ್ಗಾನ್ ಎಸ್ಟೇಟ್	600.00 ಎಕರೆ	ಪಿ.ಎಂ. ಸಬಾಸ್ಟೀನ್	(ಪಟ್ಟಾ ಜಮೀನು)

ಇ) ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬಂಡಿಪುರ ರಾಷ್ಟ್ರೀಯ ಉದ್ಯಾನವನದ ಅರಣ್ಯ ಕಾಮಗಾರಿಗಳಲ್ಲಿ ಭ್ರಷ್ಟಾಚಾರ

4328(5212) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಅರಣ್ಯ ಅಭಿವೃದ್ಧಿಯ ದೃಷ್ಟಿಯಿಂದ 2001 ರಿಂದ 2003 ರವರೆಗೆ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ : (ವಿವರ ನೀಡುವುದು) :

ಆ) ಯಾವ ಯಾವ ಅಭಿವೃದ್ಧಿ ಕಾಮಗಾರಿಗೆ ಎಷ್ಟೆಷ್ಟು ಹಣ ಮಂಜೂರು ಮಾಡಲಾಗಿದೆ ; ಇದರಲ್ಲಿ ಬಿಡುಗಡೆಯಾಗಿರುವ ಹಣ ಎಷ್ಟು ; ಪೂರ್ಣ ಪ್ರಮಾಣದಲ್ಲಿ ಬಿಡುಗಡೆಯಾಗದಿದ್ದಲ್ಲಿ ಕಾರಣವೇನು ; (ವಿವರ ನೀಡುವುದು) :

ಇ) ಕರ್ನಾಟಕ ರಾಜ್ಯ ಅರಣ್ಯ ಸಂಹಿತೆ ಪ್ರಕಾರ ಮೇಲ್ಕಂಡ ಅರಣ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ ; ಅರಣ್ಯ ಸಂಹಿತೆಯನ್ನು ಅನಧಿಕೃತವಾಗಿ ಅನುಸರಿಸಿ ಕಾಮಗಾರಿ ಕೈಗೊಳ್ಳಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ವಿವರ ನೀಡುವುದು ;

ಈ) ಅರಣ್ಯ ಸಂಹಿತೆಯನ್ನು ಅನಧಿಕೃತವಾಗಿ ಅನುಸರಿಸಿ ಕೈಗೊಂಡಿರುವ ಕಾಮಗಾರಿ ಸಂದರ್ಭದಲ್ಲಿ ಯಾವ ಯಾವ ಅಧಿಕಾರಿಗಳು ಸೇವೆಯಲ್ಲಿದ್ದರು ; ಪದನಾಮ ಹುದ್ದೆ ಸಹಿತ ವಿವರ ನೀಡುವುದು :

ಉ) ಇದರಿಂದಾಗಿ ಸರ್ಕಾರಕ್ಕೆ ವಸೂಲಿಯಾಗಬೇಕಾಗಿದ್ದ ಎಷ್ಟು ಹಣ ನಷ್ಟವಾಗಿರುತ್ತದೆ ; ನಷ್ಟಕ್ಕೆ ಕಾರಣರಾದವರ ಮೇಲೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಮತ್ತು ಆ) 2001 ರಿಂದ 2003 ನೇ ಸಾಲಿನವರೆಗೆ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಅವುಗಳಿಗೆ ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಮಂಜೂರಾದ ಅನುದಾನ 2001, 2002ನೇ ಸಾಲಿನಲ್ಲಿ ಪೂರ್ಣ ಪ್ರಮಾಣದಲ್ಲಿ ಬಿಡುಗಡೆಯಾಗಿದ್ದು 2003ನೇ ಸಾಲಿನಲ್ಲಿ ಕೇಂದ್ರ ಸಹಾಯ ನೆರವು ಹುಲಿ ಯೋಜನೆ, ಬಂಡೀಪುರ ಯೋಜನೆಯಲ್ಲಿನ ಎರಡನೇ ಕಂತಿನ ಅನುದಾನ ದಿನಾಂಕ: 31.03.2003 ರಂದು ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿರುವುದಿಲ್ಲ ಹಾಗೂ 2003–04ನೇ ಸಾಲಿಗೆ ಸದರಿ ಅನುದಾನ ರೂ. 58.12 ಲಕ್ಷವನ್ನು ನವೀಕರಿಸಿ ಬಿಡುಗಡೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಇ) ಕರ್ನಾಟಕ ಅರಣ್ಯ ಸಂಹಿತೆ ಪ್ರಕಾರ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಈ) ಅನ್ವಯಿಸುವುದಿಲ್ಲ.

ಉ) ಸರ್ಕಾರಕ್ಕೆ ನಷ್ಟ ಉಂಟಾಗಿರುವುದರ ಬಗ್ಗೆ ಮಹಾಲೇಖಪಾಲರ ಕಛೇರಿಯ ತನಿಖಾ ಸಿಬ್ಬಂದಿ ಈ ವಿಭಾಗದ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡಿರುತ್ತಾರೆ. ಸರ್ಕಾರಕ್ಕೆ ನಷ್ಟ ಉಂಟಾಗಿರುವುದರ ಬಗ್ಗೆ ಆಗಲೀ ಅಥವಾ ಉಂಟಾಗಿರುವ ನಷ್ಟವನ್ನು ವಸೂಲಾತಿ ಮಾಡುವುದಕ್ಕಾಗಲಿ ಆಕ್ಷೇಪಣೆ ವ್ಯಕ್ತಪಡಿಸಿರುವುದಿಲ್ಲ.

ಕಳೆದ ಮೂರು ವರ್ಷಗಳಲ್ಲಿ ಕಾಮಗಾರಿವಾರು ಬಿಡುಗಡೆಯಾಗಿರುವ ಅನುದಾನದ ವಿವರಗಳು

ಕ್ರಮ ಸಂಖ್ಯೆ	ಕಾಮಗಾರಿಗಳ ವಿವರ	2000–01 ಲಕ್ಷಗಳಲ್ಲಿ	2001–02 ಲಕ್ಷಗಳಲ್ಲಿ	2002–03 ಲಕ್ಷಗಳಲ್ಲಿ
1	2	3	4	5
1	ಸಿ.ಎಸ್.ಎಸ್.ಪಿ.ಟಿ.ಯಲ್ಲಿ ಸಿಬ್ಬಂದಿ ಸಂಬಳ	33.00	38.43	–

1	2	3	4	5
2	ಕಟ್ಟಡಗಳ ಪೋಷಣೆ	08.65	08.15	05.00
3	ವಾಹನಗಳ ಪೋಷಣೆ	13.35	10.20	15.00
4	ರಸ್ತೆಗಳ ನಿರ್ವಹಣೆ	11.75	09.00	08.00
5	ಹೊಸರಸ್ತೆ ನಿರ್ವಹಣೆ	20.00	06.00	10.00
6	ಆನೆಹತ್ಯೆ ತಡೆ ಶಿಬಿರಗಳಲ್ಲಿನ ವಾಚರುಗಳ ದಿನಗೂಲಿ ಹಾಗೂ ಶಿಬಿರಗಳ ನಿರ್ವಹಣೆ	32.85	30.25	37.81
7	ಬೆಂಕಿ ರಕ್ಷಣೆಯ ಕೆಲಸಗಳು	19.20	21.65	15.31
8	ವಸತಿಗೃಹಗಳ ನಿರ್ಮಾಣ	21.92	18.50	16.50
9	ಯೋಜನಾ ಭತ್ಯೆ	06.50	6.50	6.50
10	ಕೆರೆಗಳಲ್ಲಿ ಹೂಳೆತ್ತುವುದು	16.75	11.90	12.65
11	ಹೊಸಕೆರೆ ನಿರ್ವಹಣೆ	–	04.50	10.00
12	ನಿಸ್ತಂತು ನಿರ್ವಹಣೆ	0.50	0.75	0.75
13	ಪರಿಹಾರ ನೀಡುವುದಕ್ಕೆ	04.07	04.50	08.09
14	ನೀರು ಸರಬರಾಜು ಕೆಲಸಗಳು	0.25	–	–
15	ಆನೆತಡೆ ಕಂದಕ ನಿರ್ಮಾಣ, ಸೋಲಾರ್ ತಂತಿ ಬೇಲಿ ಇತ್ಯಾದಿ	105.37	34.81	15.00
16	ಸುಧಾರಿತ ಒಲೆ ನಿರ್ಮಾಣ	03.75	01.50	02.25
17	ಸೋಲಾರ್ ಲ್ಯಾಂಪ್ ಬೀದಿ ದೀಪ ಇತ್ಯಾದಿ	02.25	08.70	01.60
18	ಸ್ಥಳಾಂತರಗೊಂಡ ಗಿರಿಜನರ ಜಮೀನುಗಳ ಅಭಿವೃದ್ಧಿ ಕೆಲಸಗಳು	14.65	03.17	–
19	ಪಿಸಿಪಿ ನೌಕರರ ಹಾಗೂ ಆನೆ ಹಿಮ್ಮೆಟ್ಟಿಸುವ ವಾಚರ್‌ಗಳ ದಿನಗೂಲಿ ಹಾಗೂ ಇತರೆ	12.23	14.00	15.00
20	ಇಲಾಖಾ ಆನೆಗಳ ಮೇವು ಖರೀದಿ	06.00	05.70	05.37
21	ಮನೆಕಟ್ಟುವ ಸಾಮಾಗ್ರಿಗಳ ವಿತರಣೆ	05.10	01.85	–
22	ಬಂಬೂಗಿಡಗಳನ್ನು ಬೆಳೆಸಿರುವುದು ಹಾಗೂ ಪ್ಲಾಂಟಿಂಗ್ ಮಾಡಿರುವುದು	11.00	08.08	09.65
23	ಚೆಕ್ ಡ್ಯಾಂಗಳ ನಿರ್ಮಾಣ	21.50	11.50	17.70
24	ಗಲ್ಲಿ ಚೆಕ್ಸ ನಿರ್ಮಾಣ	11.60	04.00	07.00
25	ಮಳೆನೀರಿನ ಶೇಖರಣೆ ಪಾಂಡ್‌ಗಳು	05.00	03.50	07.00
26	ರೈತರ ಜಮೀನಿನಲ್ಲಿ ಸೋಲಾರ್ ತಂತಿಬೇಲಿ ನಿರ್ಮಿಸುವುದು	–	–	15.75
27	ಕೊಳವೆಬಾವಿ ಕೊರೆದು ಕೈಪಂಪ್ ಅಳವಡಿಸಿರುವುದು	05.73	03.20	08.50

28	ಪ್ರಕೃತಿ ಶಿಬಿರ ಆರೋಗ್ಯ ಶಿಬಿರ ತರಬೇತಿ ಇತ್ಯಾದಿ	06.68	08.62	01.50
29	ತೋಟಗಾರಿಕೆ ಗಿಡಗಳ ಖರೀದಿ	04.99	01.50	01.25
30	ಜಾನುವಾರುಗಳಿಗೆ ಕಾಲುಬಾಯಿ ಜ್ವರದ ವಿರುದ್ಧ ಲಸಿಕೆ ಹಾಕಿರುವುದು	03.75	02.00	03.60
31	ಲಾಂಟಾನಾ ತೆಗೆಯುವುದು	–	07.53	07.50
32	ಗ್ಯಾಸ್ ಸ್ಟೋವ್ ಖರೀದಿ	–	02.50	–
33	ಇತರೆ ಕೆಲಸಗಳಿಗೆ	57.00	11.00	03.35
	ಒಟ್ಟು ರೂ.	408.57	298.90	267.63

ಗ್ರಾಮ : ಪಟ್ಟಣ : ನಗರ,. ಭೂಮಾಪನ

4329(5247) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ಭೂಕಂದಾಯ ಕಾಯ್ದೆ 1964ರ ನಿಯಮ 148 ರಿಂದ 156 ರ ವರೆಗೆ ಗ್ರಾಮ, ನಗರ, ಪಟ್ಟಣ (ಸಿಟಿ ಸರ್ವೆ) ವ್ಯಾಪ್ತಿಯಲ್ಲಿ ಬರುವ ಮನೆ, ನಿವೇಶನ ಹಾಗೂ ಗ್ರಾಮದ ನಕ್ಷೆಯೊಂದಿಗೆ ಅಳತೆ ಮಾಡಲು ಅವಕಾಶವಿದೆಯೇ ;

ಆ) ಹಾಗಿದ್ದಲ್ಲಿ, ರಾಜ್ಯ ವ್ಯಾಪ್ತಿ, ಐದು ಸಾವಿರ ಜನಸಂಖ್ಯೆಗಿಂತ ಹೆಚ್ಚಿಗೆ ಇರುವ ಯಾವ ಯಾವ ಗ್ರಾಮ, ನಗರ ಹಾಗೂ ಪಟ್ಟಣಗಳ ಭೂಮಾಪನ ಮಾಡಲಾಗಿದೆ ;

ಇ) ನಗರ ಭೂಮಾಪನ ಮಾಡಲು ಕಾನೂನಿನಲ್ಲಿ ಅವಕಾಶವಿದ್ದರೂ, ಇದರ ವ್ಯಾಪ್ತಿಯಲ್ಲಿ ನೀಡಲಾಗಿರುವ ಅಧಿಸೂಚನೆಗಳು ಹಾಗೂ ನಿಯಮಗಳ ಆದೇಶ ನೀಡುವುದು ;

ಈ) ಪ್ರಸ್ತುತ ಇರುವ ಖಾಯಂ ಭೂಮಾಪಕರು ಹಾಗೂ ಲೈಸೆನ್ಸ್ ಸರ್ವೆಯರ್ ರವರಿಂದ ಹೊಸ ಹುದ್ದೆಗಳನ್ನು ಸೃಷ್ಟಿ ಮಾಡದೇ ಸಿಟಿ ಸರ್ವೆ ಮಾಡಲು ಸರ್ಕಾರದ ಅಭಿಪ್ರಾಯವೇನು ;

ಉ) ಇದರಿಂದ ಸರ್ಕಾರಕ್ಕೆ ಸುಮಾರು 100.00 ಕೋಟಿ ರೂ. ಆದಾಯ ಬರಲಿದ್ದು, 2 ಕೋಟಿ ಜನರಿಗೆ ಹಕ್ಕು ಕೈಗೊಳ್ಳುವುದೇ ;

ಊ) ಹಾಗಿದ್ದಲ್ಲಿ, ಆಗಸ್ಟ್ 15 ರಿಂದ ಸ್ವಾತಂತ್ರೋತ್ಸವದ ಕೊಡುಗೆಯಾಗಿ ಈ ಕಾರ್ಯಕ್ರಮವನ್ನು ಪ್ರತಿ ತಾಲ್ಲೂಕಿನಲ್ಲಿ ಜಾರಿಗೊಳಿಸಲಾಗುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಅವಕಾಶವಿರುತ್ತದೆ.

ಆ) ಹಾಲಿ ರಾಜ್ಯಾದ್ಯಂತ ಒಟ್ಟು 48 ನಗರ ಮತ್ತು ಪಟ್ಟಣಗಳ ನಗರಮಾಪನ ಆಗಿದ್ದು, ನಿರ್ವಹಣಾ ಕಾರ್ಯ ಪ್ರಗತಿಯಲ್ಲಿದೆ. ಪಟ್ಟಿ ಲಗತ್ತಿಸಿದೆ.

ಇ) ಕಾನೂನಿನಲ್ಲಿಯೇ ಅವಕಾಶವಿರುತ್ತದೆ. ಆದ್ದರಿಂದ ಅದರನುಸಾರ ಕ್ರಮ ಜರುಗಿಸಲಾಗುತ್ತಿದೆ.

ಈ) ಆಡಳಿತ ಸುಧಾರಣಾ ಆಯೋಗ ಸಿಟಿ ಸರ್ವೆ : ನಗರಮಾಪನ ಕಛೇರಿಗಳನ್ನು ರದ್ದುಪಡಿಸಿ ಅಲ್ಲಿನ ಸಿಬ್ಬಂದಿಯನ್ನು ಕೊರತೆ ಇರುವ ಜಿಲ್ಲೆಗಳಲ್ಲಿ ಉಪಯೋಗಿಸಿಕೊಳ್ಳಬೇಕೆಂದು ಶಿಫಾರಸ್ಸು ಮಾಡಿದೆ. ಈ ಶಿಫಾರಸ್ಸು ಪರಿಪಾಲನೆಯಲ್ಲಿದೆ.